ಸರ್ಕಾರಕ್ಕೆ ಪತ್ರವನ್ನು ಬರೆದು ನೀವು ಹಣವನ್ನು ಕೊಡುವುದಾದರೆ ಇವರಿಗೆ ಕೊಡುತ್ತಿರುವ ಗೌರವ ಧನವನ್ನು ಹೆಚ್ಚು ಮಾಡಲು ಸಾಧ್ಯವಾಗುತ್ತದೆಂದು ಹೇಳಿದ್ದೇವೆ. ಕೇಂದ್ರ ಸರ್ಕಾರದವರು ಹಣವನ್ನು ಕೊಟ್ಟರೆ ನಾವು ಹೆಚ್ಚು ಕೊಡುತ್ತೇವೆ.

ಶ್ರೀ ಆರ್. ವೆಂಕಟರಾಮಯ್ಯ.—ನೀವು ಗೌರವ ಧನವೆಂದು ಕೊಡುತ್ತಿರುವುದಕ್ಕೂ ಒಂದು ಗೌರವ ಇರಬೇಕು. ನೀವು ಅವರಿಗೆ ೫೦ ರೂಪಾಯಿಗಳನ್ನು ಏನು ಕೊಡುತ್ತಿದ್ದೀರಿ ಅಂದರೆ ಒಂದು ದಿವಸಕ್ಕೆ ಒಂದೂ ಮುಕ್ಕಾಲು ರೂಪಾಯಿ ಆಪರಿಗೆ ಕೊಡುತ್ತಿದ್ದೀರಿ ಅದರಿಂದ ಅವರಿಗೆ ಏನೂ ಪ್ರಯೋಜನವಾಗುವುದಿಲ್ಲ. ಅವರು ಬರಿಗಾಲಿನಲ್ಲಿ ಹಳ್ಳಿಹಳ್ಳಿಯನ್ನೂ ಸುತ್ತಾಡಿಕೊಂಡು ಓಡಾಡಬೇಕಾಗಿರುವುದರಿಂದ ಈ ಗೌರವ ಧನವನ್ನು ಇನ್ನೂ ಹೆಚ್ಚಿಗೆ ಕೊಟ್ಟರೆ ನಿಮಗೂ ಒಂದು ಗೌರವ ಬರುತ್ತದೆ. ಅನೇಕ ಕಡೆಗಳಲ್ಲಿ ಒಬ್ಬೊಬ್ಬ ಮಾರ್ಗದರ್ಶಿ ೪–೫ ಹಳ್ಳಿಗಳನ್ನು ಸುತ್ತಾಡಬೇಕಾಗುತ್ತದೆ. ಇನ್ನು ಕೆಲವು ಕಡೆಗಳಲ್ಲಿ ೧೦ ಹಳ್ಳಿಗಳವರೆಗೂ ಸುತ್ತಾಡಬೇಕಾದ ಪರಿಸ್ಥಿತಿ ಇದೆ. ಇದನ್ನು ತಾವು ಅರ್ಥಮಾಡಿಕೊಳ್ಳಬೇಕು.

ಶ್ರೀ ಹೆಚ್. ಎಲ್. ತಿಮ್ಮೇಗೌಡ.—೧೦ ಹಳ್ಳಿಗಳಿಗೆ ಒಬ್ಬರಂತೆ ನಾವು ನೇಮಕ ಮಾಡಿಲ್ಲ. ೨–೩ ಹಳ್ಳಿಗಳಿಗೆ ಒಬ್ಬೊಬ್ಬರು ಇರುತ್ತಾರೆ. ೧೦೦೦ ಜನರಿಗೆ ಒಬ್ಬರಂತೆ ಮಾಡಿದ್ದೇವೆ. ನಾವು ಅವರನ್ನು ನೇಮಕ ಮಾಡಿಕೊಳ್ಳುವಾಗ ನಿಮಗೆ ಗೌರವ ಧನ ಎಂದು ೫೦ ರೂಪಾಯಿಗಳನ್ನು ಕೊಡುತ್ತೇವೆಂದು ಹೇಳಿಯೇ ನೇಮಕ ಮಾಡಿಕೊಂಡಿರುತ್ತೇವೆ. ಆದರೆ ಈಗ ಇವರಿಗೆ ಇದನ್ನು ಹೆಚ್ಚು ಮಾಡಬೇಕೆಂದರೆ ಸರ್ಕಾರಕ್ಕೆ ಹೆಚ್ಚು ಖರ್ಚು ಬರುತ್ತದೆ. ಸಾಮಾನ್ಯವಾಗಿ ೮–೧೦ ಸಾವಿರ ಜನಸಂಖ್ಯೆ ಇರುವ ಕಡೆಗಳಲ್ಲಿ ಒಂದೊಂದು ಆಸ್ಪತ್ರೆಯನ್ನೇ ಕೊಟ್ಟಿದ್ದೇವೆ. ಇವರಿಂದ ನಾವು ನಿರೀಕ್ಷೆ ಏನು ಮಾಡಿದ್ದೇವೆಂದರೆ ಇವರು ಆ ಊರಿನಲ್ಲೇ ಇದ್ದುಕೊಂಡು ಅಲ್ಲಿನ ಜನರಿಗೆ ಸಣ್ಣಪುಟ್ಟ ಕಾಯಿಲೆಗಳು ಬಂದಾಗ ಸಹಾಯ ಮಾಡಲಿ ಎಂಬುದಾಗಿ. ಈ ಕೆಲಸವನ್ನು ನಾವು ಮಾಡಿಸಿಕೊಳ್ಳುವುದರಿಂದ ಇವರಿಗೆ ಏನಾದರೂ ಸ್ವಲ್ಪ ಸಂಭಾವನೆಯನ್ನು ಕೊಡೋಣವೆಂದು ತೀರ್ಮಾನಿಸಿ ತಿಂಗಳಿಗೆ ೫೦ ರೂಪಾಯಿಂಗಳನ್ನು ಕೊಡುತ್ತಿದ್ದೇವೆ ಆದರೆ ಈ ಹಣ ಸಾಲದು, ಇವರಿಗೆ ನೀವು ಅನ್ಯಾಯ ಮಾಡುತ್ತಿರುವಿರೆಂದು ತಾವು ಹೇಳುವುದಾದರೆ ಇದಕ್ಕೆ ನಾವು ಏನೂ ಮಾಡುವುದಕ್ಕೆ ಬರುವುದಿಲ್ಲ.

ಶ್ರೀ ಆರ್. ವೆಂಕಟರಾಮಯ್ಯ.—ನೀವು ಅವರಿಗೆ ಸ್ವಲ್ಪ ಮದ್ದನ್ನು ಕೊಡುತ್ತೀರಿ. ಅವರು ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಯೋಜನೆಯ ಅಡಿಯಲ್ಲಿ ಕೆಲಸ ಮಾಡುತ್ತಿದ್ದಾರೆ. ಇದರ ಜೊತೆಗೆ ಅವರು ಈ ಬೇರೆ ಕೆಲಸವನ್ನೂ ಮಾಡುತ್ತಿದ್ದಾರೆ. ಆದ್ದರಿಂದ ನೀವು ಇವರಿಗೆ ಏನಾದರೂ ಇನ್‌ಸೆಂಟಿವ್ ಕೊಟ್ಟು ಸಹಾಯ ಮಾಡಬೇಕು. ಕೇಂದ್ರ ಸರ್ಕಾರದವರು ಕೊಡತಕ್ಕದ್ದು ಸಾಲುವುದಿಲ್ಲ. ಅವರು ಕೊಡುತ್ತಿರುವ ಹಣದ ಜೊತೆಗೆ ರಾಜ್ಯ ಸರ್ಕಾರದವರೂ ಕೂಡ ಸ್ವಲ್ಪ ಹಣವನ್ನು ಕೊಡಬೇಕು.

ಶ್ರೀ ಹೆಚ್. ಎಲ್. ತಿಮ್ಮೇಗೌಡ.—ಇವರ ಕೆಲಸದ ಜೊತೆಗೆ ಬೇರೆ ರೀತಿಯ ಸಂಪಾದನೆ ಮಾರ್ಗವೂ ಇದೆ. ಕುಟುಂಬ ಕಲ್ಯಾಣ ಶಸ್ತ್ರ ಚಿಕಿತ್ಸೆಯನ್ನು ಮಾಡಿಸಿಕೊಳ್ಳಲು ಜನರ ಮನವೊಲಿಸಿದರೆ ಒಂದೊಂದು ಕೇಸಿಗೂ ಇಂತಿಷ್ಟು ಹಣ ಎಂದು ಸರ್ಕಾರದಿಂದ ಕೊಡುತ್ತಿದ್ದೇವೆ. ಈ ಬಾಬಿನಿಂದಲೂ ಇವರಿಗೆ ಸಾಕಷ್ಟು ಆದಾಯ ಇದೆ ಎನ್ನುವ ವಿಷಯನ್ನು ಹೇಳ ಬಯಸುತ್ತೇನೆ.

## ಕಾಪು ಪೋಲಿಸ್ ಔಟ್‌ಪೋಸ್ಟ್ ಸಿಬ್ಬಂದಿ ವರ್ಗಕ್ಕೆ ವಸತಿ ಸೌಕರ್ಯ ಒದಗಿಸುವ ಬಗ್ಗೆ

೩೫೫ ಶ್ರೀ ವಸಂತ ವಿ. ಸಾಲಿಯಾನ (ಕಾಪು).—ಮಾನ್ಯ ಗೃಹ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ ?

(ಅ) ಕಾಪು ಪೋಲೀಸ್ ಔಟ್‌ಪೋಸ್ಟ್ ಸಿಬ್ಬಂದಿ ವರ್ಗಕ್ಕೆ ವಸತಿ ಸೌಕರ್ಯ ಒದಗಿಸುವ ಯೋಜನೆ ಯಾವ ಹಂತದಲ್ಲಿದೆ.

(ಆ) ಈ ಯೋಜನೆ ಕಾರ್ಯಗತವಾಗದಿರಲು ಕಾರಣಗಳೇನು ?

(ಇ) ಈ ಯೋಜನೆ ಎಂದು ಕಾರ್ಯಗತವಾಗಬಹುದು ?

ಶ್ರೀ ಬಿ. ರಾಚಯ್ಯ (ಗೃಹ ಸಚಿವರು).—

(ಅ) ಕಾಪು ಪೋಲೀಸ್ ಔಟ್‌ಪೋಸ್ಟ್ ಸಿಬ್ಬಂದಿ ವರ್ಗಕ್ಕೆ ವಸತಿ ಸೌಕರ್ಯ ಒದಗಿಸುವ ಕಾರ್ಯವನ್ನು ಸದ್ಯಕ್ಕೆ ತೆಗೆದುಕೊಂಡಿಲ್ಲ.

(ಆ) ಹಣದ ಕೊರತೆಯಿಂದಾಗಿ ನಿರ್ಮಾಣದ ಕೆಲಸವನ್ನು ಕೈಕೊಳ್ಳಲಾಗಲಿಲ್ಲ.

(ಇ) ಕರ್ನಾಟಕ ರಾಜ್ಯ ಆರಕ್ಷಕ ವಸತಿ ನಿಗಮವು ರಾಜ್ಯದಾದ್ಯಂತ ಆರಕ್ಷಕ ವಸತಿ ಗೃಹಗಳನ್ನು ಹಂತ ಹಂತವಾಗಿ ಕಟ್ಟುವ ಯೋಜನೆಯನ್ನು ಹೊಂದಿದೆ.

ಶ್ರೀ ವಸಂತ ವಿ. ಸಾಲಿಯಾನ.—ಮಾನ್ಯ ಅಧ್ಯಕ್ಷರೇ, ಹಲವಾರು ವರ್ಷಗಳಿಂದ ಕಾಪುವಿಗೆ ಔಟ್‌ಪೋಸ್ಟ್ ಪೋಲೀಸ್ ಸ್ಟೇಷನ್ ಬೇಕೆಂದು ಕೇಳಿದ್ದರೂ ಮಂಜೂರಾಗದೆ ಇರತಕ್ಕದ್ದು ಸರ್ಕಾರದ ಗಮನಕ್ಕೆ ಬಂದಿರಬೇತ್ತದೆಯೇ ? ಕಾಪು ಮತ್ತು ಕಾಪುವಿನ ಸುತ್ತ ಮುತ್ತ ಹಳ್ಳಿಗಳಲ್ಲಿ ಹಲವಾರು ಮುಖ್ಯವಾದ ದೇವಸ್ಥಾನಗಳಿದ್ದು ಕೋಟ್ಯಾಂತರ ರೂಪಾಯಿ ಆಭರಣಗಳನ್ನು ಹೊಂದಿರುತ್ತವೆ. ಅಲ್ಲಿ ಒಂದೇ ಒಂದು ಸೆಂಟ್ರಿ ಇರುವುದರಿಂದ, ರಾತ್ರಿ ಹೊತ್ತಿನಲ್ಲಿ ಸಂಪರ್ಕವಾಗಿ ಕಾರ್ಯ ನಿರ್ವಹಿಸಲು ಸಾಧ್ಯವಾಗುತ್ತಿಲ್ಲ. ಸಂಬಂಧಪಟ್ಟ ಅಧಿಕಾರಿಗಳಿಗೂ ವಸತಿ ಸೌಕರ್ಯಗಳು ಇರುವುದಿಲ್ಲ. ಆದ್ದರಿಂದ ಅಧಿಕಾರಿಗಳಿಗೆ ವಸತಿ ಸೌಕರ್ಯಗಳನ್ನು ಒದಗಿಸಿ ಕೊಡಬೇಕೆಂದು ಒತ್ತಾಯ ಮಾಡುತ್ತಿದ್ದೇನೆ. ಮತ್ತು ಗ್ರಾಮಾಂತರ ಪ್ರದೇಶಗಳಲ್ಲಿ ವಾಸವಾಗಿರತಕ್ಕಂಥ ಪೋಲೀಸ್ ಸಿಬ್ಬಂದಿಯವರಿಗೂ ವಸತಿ ಸೌಲಭ್ಯ ಗಳನ್ನು ಒದಗಿಸಿಕೊಡಬೇಕೆಂದು ಕೇಳಿಕೊಳ್ಳುತ್ತೇನೆ.

ಶ್ರೀ ಬಿ. ರಾಚಯ್ಯ.—ಈಗಾಗಲೇ ಉಡುಪಿ ಸರ್ಕಲ್‌ನಲ್ಲಿರುವ ಕಾಪುವಿಗೆ ಒಬ್ಬ ಮುಖ್ಯ ಪೇದೆ, ನಾಲ್ಕು ಜನ ಪೇದೆಗಳನ್ನು ಮಂಜೂರಾತಿ ಮಾಡಲಾಗಿದೆ. ಈಗಾಗಲೇ ಕರ್ನಾಟಕ ರಾಜ್ಯ ಆರಕ್ಷಕ ವಸತಿ ನಿಗಮವು ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ೪೭–೪೮ ವಸತಿ ಗೃಹಗಳನ್ನು ಕಟ್ಟಿಸಿದೆ. ಇನ್ನೂ ಒಂದು ಕೋಟಿ ಎಂಟು ಸಾವಿರ ರೂಪಾಯಿಗಳ ಅಂದಾಜು ವೆಚ್ಚದಲ್ಲಿ ೧೪೪ ವಸತಿ ಗೃಹಗಳನ್ನು ದಕ್ಷಿಣ ಕನ್ನಡ ಜಿಲ್ಲೆಗೆ ಕೊಡತಕ್ಕಂಥ ಯೋಜನೆ ಸಹ ಇದೆ. ಆದ್ದರಿಂದ ಇದಕ್ಕಾಗಿ ಹಂತಹಂತವಾಗಿ ಹಣ ವಿನಿಯೋಗ ಮಾಡತಕ್ಕಂಥ ಪ್ರಯತ್ನ ಮಾಡುತ್ತೇವೆ. ಈ ವರ್ಷ ಇಷ್ಟು ಮಾತ್ರ ದಕ್ಷಿಣ ಕನ್ನಡ ಜಿಲ್ಲೆಗೆ ತೆಗೆದು ಕೊಂಡಿರುತ್ತೇವೆ.

ಶ್ರೀ ಆರ್. ಎನ್. ನಾಯಕ್.—ಗೃಹ ಮಂತ್ರಿಗಳು ತಮ್ಮ ಪ್ರವಾಸ ಕಾಲದಲ್ಲಿ ಹೊನ್ನಾವರ ವಂತ್ತು ಭಟ್ಕಳಕ್ಕೆ ಪ್ರವಾಸ ಬಂದಿದ್ದಾಗ, ಪೋಲೀಸ್ ಸ್ಟೇಷನ್ ಮತ್ತು ವಸತಿ ಗೃಹಗಳ ಪರಿಸ್ಥಿತಿ ಯನ್ನು ತೋರಿಸಿರುತ್ತೇವೆ. ಆದ್ದರಿಂದ ಹೊನ್ನಾವರ ಮತ್ತು ಭಟ್ಕಳದಲ್ಲಿ ಪೋಲೀಸ್ ಗೃಹಗಳನ್ನು ಇಂಪ್ರೂವ್ ಮಾಡುವುದಕ್ಕೆ ಅಥವಾ ಹೊಸ ಕಟ್ಟಡಗಳನ್ನು ಕಟ್ಟಲಿಕ್ಕೆ ಹಣವನ್ನು ತೆಗೆದಿರಿಸುವ ಬಗೆ ಪ್ರಯತ್ನ ಮಾಡುತ್ತೀರಾ ? ರಾಜ್ಯದಲ್ಲಿ ಪೋಲೀಸ್ ಖಾತೆಯವರಿಗೆ ವಸತಿ ಸೌಕರ್ಯಗಳು ಇಲ್ಲದ್ದಿಗೆ ತೊಂದರೆಪಡುತ್ತಿರುವುದರ ಬಗ್ಗೆ ಹೇಳಿಕೆಯನ್ನು ಕೊಡುತ್ತೀರಾ ಎಂದು ಕೇಳುತ್ತೇನೆ.

ಶ್ರೀ ಬಿ. ರಾಚಯ್ಯ.—ಮಾನ್ಯ ಸದಸ್ಯರು ಇದಕ್ಕೆ ಸಂಬಂಧಪಟ್ಟಹಾಗೆ ಪ್ರತ್ಯೇಕ ಪ್ರಶ್ನೆಯನ್ನು ಕೇಳಿದರೆ ಉತ್ತರವನ್ನು ಕೊಡುತ್ತೇನೆ.

ಶ್ರೀ ವಸಂತ ವಿ. ಸಾಲಿಯಾನ.—ಮಾನ್ಯ ಸಚಿವರ ಗಮನವನ್ನು ಇತ್ತ ಹರಿಸಬೇಕೆಂದು ಕೇಳಿಕೊಳ್ಳುತ್ತಿದ್ದೇನೆ. ಇಲ್ಲಿ ತುಂಬಾ ಜನಸಂಖ್ಯೆ ಇರುತ್ತದೆ ಹಾಗೂ ಈ ದೇವಸ್ಥಾನಗಳಲ್ಲಿ ಲಕ್ಷಾಂತರ ರೂಪಾಯಿಗಳ ಆಭರಣಗಳು ಇರುತ್ತವೆ. ಆದ್ದರಿಂದ ಕಾಪುವಿಗೆ ಔಟ್‌ಪೋಸ್ಟ್ ಪೋಲೀಸ್ ಸ್ಟೇಷನ್‌ನ ಅಗತ್ಯತೆ ಬಹಳವಾಗಿರುತ್ತದೆ. ಆದ್ದರಿಂದ ಸರ್ಕಾರದವರು ಆದಷ್ಟು ಜಾಗ್ರತೆ ಇದರ ಬಗ್ಗೆ ಕ್ರಮ ಕೈಗೊಳ್ಳಬೇಕೆಂದು ಕೇಳಿಕೊಳ್ಳುತ್ತೇನೆ.

ಶ್ರೀ ಬಿ. ರಾಚಯ್ಯ.—ಮಾನ್ಯ ಸದಸ್ಯರು ತಿಳಿಸಿದ್ದಾರೆ. ಐದು ವರ್ಷಗಳ ಯೋಜನೆಯನ್ನು ಇಟ್ಟುಕೊಂಡು ಹಂತ ಹಂತವಾಗಿ ಎಲ್ಲೆಲ್ಲಿ ಸ್ಟೇಷನ್‌ಗಳ ಸೌಲಭ್ಯವನ್ನು ಹೆಚ್ಚಿಸಬೇಕು ಹಾಗೂ ಎಲ್ಲೆಲ್ಲಿ ಇರತಕ್ಕಂಥ ಸ್ಟೇಷನ್‌ಗಳನ್ನು ಭದ್ರಪಡಿಸಬೇಕು ಎನ್ನುವ ಬಗ್ಗೆ ಕಾರ್ಯಕ್ರಮ ಹಾಕಿಕೊಂಡಿದ್ದೇವೆ. ಮುಂದಿನ ವರ್ಷ ಇಂಥ ವಿಷಯಗಳನ್ನು ಗಮನದಲ್ಲಿಟ್ಟುಕೊಂಡು ಎಲ್ಲಿ ಅವಶ್ಯಕತೆ ಇದೆಯೋ ಅಂಥ ಕಡೆ ವಸತಿ ಗೃಹಗಳನ್ನು ಕೊಡಲಿಕ್ಕೆ ಪ್ರಯತ್ನ ಮಾಡುತ್ತೇವೆಂದು ಹೇಳುತ್ತೇನೆ.